ಸಿಸಿ. ನಂಬರ್.731/2021
ಪಿ ಡಬ್ಲ್ಯು: 1

ದಿನಾಂಕ:09-12-2024 ರಂದು ಮಧ್ಯಂತರ ಅರ್ಜಿಯ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಆರೋಪಿ ಪರ ಶ್ರೀ.ಕೆ ಆರ್ ಕೆ., ವಕೀಲರಿಂದಃ**

ನಾನು ನನ್ನ ಹಿಂದಿನ ವಿಚಾರಣೆಯಲ್ಲಿ ಆರೋಪಿಯವರು ಡ್ರೈವಿಂಗ್ ಕೆಲಸವನ್ನು ಮಾಡುತ್ತಿದ್ದರು ಎಂಬ ಬಗ್ಗೆ ನುಡಿದಿದ್ದು, ಆರೋಪಿಯವರು ಆರ್ಥಿಕವಾಗಿ ಸದೃಢವಾಗಿರುತ್ತಾರೆ, ಅವರು contractor ಕೆಲಸವನ್ನು ಮಾಡುತ್ತಿದ್ದಾರೆ, ಯಾವುದೇ ಡ್ರೈವಿಂಗ್ ಕೆಲಸವನ್ನು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯವರ ವಿಳಾಸವನ್ನು ನಾನು ಗಂಗನಸರಳು ಎಂದು ನಮೂದಿಸಿದ್ದು ಆದರೆ ಅವರ ವಿಳಾಸ ಚಿಕ್ಕನಗುಂಡಿಯಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ಯಾವುದೇ ವಿಚಾರಗಳು ನನಗೆ ಗೊತ್ತಿರುವುದಿಲ್ಲ, ಅದೇ ರೀತಿ ಅವರ ವಿಳಾಸದ ಬಗ್ಗೆ ನನಗೆ ಗೊತ್ತಿರುವುದಿಲ್ಲ, ನಾನು ನೀಡಿರುವ ನೋಟಿಸ್ ಅವರಿಗೆ ತಲುಪಿರುವುದಿಲ್ಲ ಹಾಗೂ ಆರೋಪಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ನೋಟಿಸನ್ನು ಆರೋಪಿಯವರು ನಿರಾಕರಿಸಿರುತ್ತಾರೆ ಎಂದು ಸುಳ್ಳಾಗಿ ಬರೆಸಿಕೊಂಡು ಅವರ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯವರು ತಾಜೀಲ್ ಮುಬೀನ್ 4 ಚೆಕ್ಕುಗಳನ್ನು ನೀಡಿದ್ದು ಅವುಗಳನ್ನು ನಾನು ತಾಜೀಲ್ ಮುಬೀನ್ ಅವರ ಮನೆಯಿಂದ ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯವರು ಈ ಪ್ರಕರಣದಲ್ಲಿರುವ 919333 ಚೆಕ್ಕನ್ನು ಹಾಗೂ 919332 , 919334 ಹಾಗೂ 919335 ಚೆಕ್ಕುಗಳನ್ನು ತಾಜೀಲ್ ಮುಬೀನ್ ಅವರಿಗೆ ಕೊಟ್ಟಿದ್ದು, ಅವುಗಳನ್ನು ನಾನು ತಾಜೀಲ್ ಮುಬೀನ್ ಅವರ ಮನೆಯಿಂದ ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. 8073317569 ನನ್ನ ಮೊಬೈಲ್ ನಂಬರ್ ಆಗಿರುತ್ತದೆ ಎಂದರೆ ಸರಿ. ದಿನಾಂಕ:02/12/2024 ರಂದು ನನ್ನ

ವಿಚಾರಣೆಯಾದ ನಂತರ ನಾನು ನನ್ನ ಮೊಬೈಲ್ ಮೂಲಕ 7019911524 ಮೊಬೈಲ್ ನಂಬರಿಗೆ ಕರೆ ಮಾಡಿ ತಾಜಿಲ್ ಮುಬೀನ್ ಅವರಿಗೆ ಸದರಿ ಪ್ರಕರಣವನ್ನು ರಾಜಿ ಮಾಡಿಕೊಳ್ಳಿ ಇಲ್ಲವಾದರೆ ಉಳಿಂತಹ 3 ಚೆಕ್ಕುಗಳನ್ನು ಬೆಂಗಳೂರಿನಿಂದ ಬೇರೆಯವರ ಮೂಲಕ ಪ್ರಕರಣಗಳನ್ನು ದಾಖಲಿಸಿಕೊಳ್ಳುತ್ತೇನೆ ಎಂದು ಬೆದರಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕರೆಯನ್ನು ನಾನು ದಿನಾಂಕ:04/12/2024 ರಂದು ಬೆಳಿಗ್ಗೆ 11-40 ಗಂಟೆ ಸಮಯದಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಒಂದು ವೇಳೆ ನಾನು ಉಳಿದಂತಹ ಚೆಕ್ಕುಗಳ ಆಧಾರದ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲು ಮಾಡಿದರೆ ತಾಜೀಲ್ ಮುಬೀನ್ ಅವರು ನನ್ನ ವಿರುದ್ದ ಪೋಲಿಸ್ ದೂರನ್ನು ಕೊಡಬೇಕಾಗುತ್ತದೆ ಎಂದರೆ ಇರಬಹುದು. ಸದರಿ ಪ್ರಕರಣವನ್ನು ಸೈಬರ್ ಪೋಲಿಸ್ ಗೆ ನೀಡಲು ನನಗೆ ಯಾವುದೇ ಅಭ್ಯಂತರ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ನನಗೂ ಹಾಗೂ ಆರೋಪಿಯ ನಡುವೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹಾ ತಾಜಿಲ್ ಮುಬೀನ್ ಅವರಿಂದ ಚೆಕ್ಕುಗಳನ್ನು ತೆಗೇದುಕೊಂಡು ಅವರಿಗೆ ಬೆದರಿಕೆಯನ್ನು ಹಾಕಿ ಈ ಸುಳ್ಳು ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

: ಮರು ವಿಚಾರಣೆ ಇಲ್ಲಾ:

(ದಿನಾಂಕ:09-12-2024 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸ.ಇ. ಓ.

ಸಹಿ/-
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ: ಕೊಪ್ಪ.

ಸಾಕ್ಷಿಯ ಸಹಿ: